**ವ್ಯಾಖ್ಯಾನ**

# <u>ಭಾಗ್ಯದಾ ಲಕ್ಷ್ಮೀ ಬಾರಮ್ಮಾ</u>

ಕೀರ್ತನೆಯ ಚಿಂತನೆ:

**ಭಾಗ್ಯದ ಲಕ್ಷ್ಮೀ ಬಾರಮ್ಮ**
**ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ || ಪ ||**

**ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ**
**ಗೆಜ್ಜೆ ಕಾಲ್ಗಳ ಧ್ವನಿಯ ಮಾಡುತ**
**ಸಜ್ಜನ ಸಾಧು ಪೂಜೆಯ ವೇಳೆಗೆ**
**ಮಜ್ಜಿಗೆಯೊಳಗಿನ ಬೆಣ್ಣೆಯಂತೆ || ೧ ||**

**ಕನಕ ವೃಷ್ಟಿಯ ಕರೆಯುತ ಬಾರೆ**
**ಮನ ಕಾಮನೆಯ ಸಿದ್ಧಿಯ ತೋರೆ**
**ದಿನಕರ ಕೋಟಿ ತೇಜದಿ ಹೊಳೆವ**
**ಜನಕ ರಾಯನ ಕುಮಾರಿ ಬೇಗ || ೨ ||**

**ಅತ್ತಿತ್ತಗಲದೆ ಭಕ್ತರ ಮನೆಯಲಿ**
**ನಿತ್ಯ ಸುಮಂಗಳ ನಿತ್ಯ ಮಹೋತ್ಸವ**
**ಸತ್ಯವ ತೋರುವ ಸಾಧು ಸಜ್ಜನರ**
**ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ || ೩ ||**

**ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು**
**ಕಂಕಣ ಕೈಯ ತಿರುವುತ ಬಾರೆ**
**ಕುಂಕುಮಾಂಕಿತೆ ಪಂಕಜಲೋಚನೆ**
**ವೆಂಕಟ ರಮಣನ ಬಿಂಕದ ರಾಣಿ || ೪ ||**

**ಸಕ್ಕರೆ ತುಪ್ಪದ ಕಾಲುವೆ ಹರಿಸಿ**
**ಶುಕ್ರವಾರದ ಪೂಜೆಯ ವೇಳೆಗೆ**

**ಅಕ್ಕರೆಯುಳ್ಳ ಅಳಗಿರಿ ರಂಗನ**
**ಚೊಕ್ಕ ಪುರಂದರ ವಿಠ್ಠಲನ ರಾಣಿ || ೫ ||**

**ಸೌಭಾಗ್ಯ –**

**ಭಾಗ್ಯದಾ ಲಕ್ಷ್ಮೀ ಬಾರಮ್ಮಾ**

**ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮಾ || ಪ ||**

ದಾಸವರೇಣ್ಯರ ಮಾತು. ಎಲ್ಲರಿಗೂ ಚಿರಪರಿಚಿತ. ಲಕ್ಷ್ಮೀ, ಶ್ರೀರಮಣನ ರಮಣಿ. ಸಕಲ ಸಂಪತ್ತಿನ ಒಡತಿ. ಸಂಪತ್ತಿನ ಸೌಭಾಗ್ಯ ಯಾರಿಗೆ ಬೇಡ? ಶುಕ್ರವಾರವಂತೂ ಎಲ್ಲರೂ ಹಾಡುವ ಹಾಡು.
ಸಿರಿ ಸೌಭಾಗ್ಯ ತೆಗೆದು ಕೊಂಡು ಬಾ. ನಮ್ಮ ಮನೆಯಲ್ಲಿ ಸ್ಥಿರವಾಗಿ ನೆಲೆಸು, ಇದು ದಾಸರ ಪ್ರಾರ್ಥನೆ. ಮೇಲ್ನೋಟಕ್ಕೆ ಕಾಣುವ ಅರ್ಥವಿದು. ಪುರುಂದರ ದಾಸರೋ ನವಕೋಟಿ ನಾರಾಯಣರಾಗಿದ್ದವರು. ದೇವ ವಿಠ್ಠಲ ಕೊಟ್ಟ ಅದ್ಭುತ ಅನುಭವ. ಜೀವನ ಗತಿ ಬದಲಾಯಿಸಿತು.
ನಶ್ವರ ಸಂಪತ್ತು ಬೇಡ. ಶಾಶ್ವತಸಿರಿ – ದೇವರ ದೇವನ ಅನುಗ್ರಹ ಬೇಕು. ಇನ್ನೆಲ್ಲ ಸಾಕು ಎಂದರು. ನವಕೋಟಿ ಸಂಪತ್ತಿನ ಮೇಲೆ ತುಳಸೀ ದಳವೊಂದಿಟ್ಟರು. ಕೃಷ್ಣಾರ್ಪಣ ಎಂದರು. ಉಟ್ಟ ಬಟ್ಟೆ ಮೇಲೆ ಮನೆಬಿಟ್ಟರು.
ವಿಠ್ಠಲನ ದರ್ಶನಕ್ಕೆ ಬಂದರು. ಇಂಥ ವಿರಕ್ತ ಶಿಖಾಮಣಿಗಳು ದಾಸರು. ಲೌಕಿಕ ಸಂಪತ್ತು ತೃಣೀಕರಿಸಿ ಬಂದ ಮಹಾನುಭಾವರು ಮತ್ತೆ ಮನೆಯಲ್ಲಿ ಸಂಪತ್ತು ಬಯಸುವದುಂಟೇ? ಇಲ್ಲ.

ಹೀಗೊಂದು ರೀತಿ ಅರ್ಥೈಸ ಬಹುದು. ಲೌಕಿಕ ಅಲ್ಲ. ಅಲೌಕಿಕ ಸಂಪತ್ತು ಕೊಡಬಾರೇ ತಾಯೇ, ಎಂದು ಲಕ್ಷ್ಮೀ ಯನ್ನು ಕರೆದಿದ್ದು ದಾಸರು. ಸೌಭಾಗ್ಯ ಕೊಡುವ ಲಕ್ಷ್ಮೀ ಬಾರೆ.
ಏನು ಸೌಭಾಗ್ಯ?
ಹೆಣ್ಣು ಮಕ್ಕಳಿಗೆ ಕುಂಕುಮ ಸೌಭಾಗ್ಯ. ಹಾಡು ಇಬ್ಬರಿಗೂ ಇದೆ.
ಸ್ತ್ರೀ ಪುರುಷರಿಬ್ಬರಿಗೂ ಪರಮ ಸೌಭಾಗ್ಯ - ಪರಮಾತ್ಮನ ವಿಶೇಷ ಅನುಗ್ರಹ – ದರ್ಶನ - ಪರಮ ಪುರುಷಾರ್ಥ - ಶಾಶ್ವತ ಸ್ವರೂಪಾನಂದ ಆವಿರ್ಭಾವ - ಮೋಕ್ಷ.

ಲಕ್ಷ್ಮೀ ದೇವಿ ಪತಿಯ ಅನುಗ್ರಹದಿಂದ ಭಕ್ತರಿಗೆ ಪುರುಷಾರ್ಥ ಕೊಡಿಸಬಲ್ಲಳು. ಹೇಳಲಿಲ್ಲವೇ -

**'ಯಂ ಕಾಮಯೇ ತಂ ಉಗ್ರಂ ಕೃಣೋಮಿ' --**

ಇಚ್ಛಿಸಿದವರಿಗೆ ಪರಮಾತ್ಮನ ಅನುಗ್ರಹದಿಂದ ಬ್ರಹ್ಮ ರುದ್ರಾದಿ ಪದವಿ ಕೊಡಬಲ್ಲೆ.

ಅದು ಅವಳ ಸಾಮರ್ಥ್ಯ. ಮೋಕ್ಷದಂತಹ ಸೌಭಾಗ್ಯ ಕೊಡಿಸಲು ನಮ್ಮ ಮನೆ - ಮನ – ಹೃದಯಕಮಲಕ್ಕೆ ಬಾ ತಾಯೇ. ಸ್ಥಿರವಾಗಿ ನೆಲೆಸು. ಹೊಸಕಣ್ಣು ಹಚ್ಚು ಹರಿಯ ದರ್ಶನ ಮಾಡಿಸು. ಬಿಂಬರೂಪ ತೋರಿಸು.

**ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ**

**ಗೆಜ್ಜೆ ಕಾಲಿನ ನಾದವ ತೋರುತ**

ಸಾಧನೆ ಸರಾಗವಲ್ಲ. ಅಲ್ಲಿ ಗಡಿಬಿಡಿ ಸಲ್ಲ. ಇಂದು ಬಯಸಿ ನಾಳೆ ಬೆಳಿಗ್ಗೆ ಪಡೆಯುವದಲ್ಲ.

ಅನೇಕ ಜನುಮಗಳ ಯಾತ್ರೆ ಸಾಧನೆ. ಹಂತಹಂತವಾಗಿ ಆಗಬೇಕು. ಮೆಟ್ಟಿಲು ಏರುತ್ತ ಸಾಗಬೇಕು.

ಮೆಲ್ಲ ಮೆಲ್ಲನೇ ಸಾಧನೆಯ ಹೆಜ್ಜೆ ಇಡಬೇಕು. ಒಂದರ ಮೇಲೊಂದಿಡ ಬೇಕು. ಮುಂದೆಕೆ ಸಾಗುತಿರಬೇಕು. ಗತಿ ಇರಬೇಕು ಪರಮಾತ್ಮನತ್ತ. ಅದಕ್ಕಾಗಿ ದಾಸರು ಹೇಳಿದ್ದು -

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ. ಗೆಜ್ಜೆ ಕಾಲಿನ ನಾದವ ತೋರುತ -

ನಾದ ಎಂದರೆ ವೇದ. ಸನಾದ = ವೇದ ಸಹಿತ. ಸನಾತನ ಧರ್ಮ= ವೇದೋಕ್ತ ಧರ್ಮ. ಜಗನ್ಮಾತೆ

ನಾದವ ತೋರು. ವೇದವ ತೋರು. ವೇದಕ್ಕೆ ಒಡೆಯಳು, ಮುಖ್ಯ ಅಭಿಮಾನಿ ಲಕ್ಷ್ಮೀ ದೇವಿಯೇ. ಅವಳು ವೇದ ತೋರಿಸಿ ತಿಳಿಸಿದರೆ ಉಂಟು ವೇದದ ನಂಟು. ಇಲ್ಲದಿರೆ ವೇದ ಕಗ್ಗಂಟು.

ತಾಯೇ, ವೇದ, ಶಾಸ್ತ್ರ ತಿಳಿಸು. ಹರಿ ಮಹಾತ್ಮ ಮನನ ಮಾಡಿಸು. ಅವನಲ್ಲಿ ಜ್ಞಾನ ಭಕ್ತಿ ಕೊಡಿಸು.

ಜ್ಞಾನ ಭಕ್ತಿ ವಿರಕ್ತಿ ಪಕ್ವಗೊಳಿಸಿಸು. ಪರಮಾತ್ಮನ ವಿಶೇಷ ಅನುಗ್ರಹ ದೊರೆಯುವಂತೆ ಮಾಡು.

**ಸಜ್ಜನಸಾಧು ಪೂಜೆಯ ವೇಳೆಗೆ -**

ಜ್ಞಾನಿಗಳು ಸಜ್ಜನರು. ಅವರು ಮಾಡುವದೆಲ್ಲ ದೇವರ ಪೂಜೆ - ಉಪಾಸನೆ- ಬ್ರಹ್ಮ ಜಿಜ್ಞಾಸೆ - ಪರಮಾತ್ಮನ ಮಹಾತ್ಮೆ ತಿಳಿಯುವದು, ತಿಳಿಸುವದು, ಸೂರಾಡುವದು.

ಮತ್ತೆ ಅವರ ಪೂಜೆ – ಶ್ರವಣ, ಮನನ, ನಿಧಿ ಧ್ಯಾಸನ, ಶಾಸ್ತ್ರ ಶ್ರವಣ ಮಾಡಿಸು. ಅದನ್ನೇ ಸಜ್ಜನರಲಿ ಮನನ ಮಾಡಲಿ. ನಿತ್ಯ ಜೀವನದಲಿ ಅನುಸಂಧಾನ ಮಾಡಲಿ. ಇಡೀ ದಿನ ಎಲ್ಲ ಪರಮಾತ್ಮನ ಪೂಜೆಯಾಗಲಿ. ನಿತ್ಯದ ಬಾಳಿನಲ್ಲಿ ಪರಮಾತ್ಮನ ಮಹಾತ್ಮೆ ಬೆಳಕಾಗಲಿ. ತಿಳಿಯಲಿ. ಅರಿವು ಮೂಡಲಿ. ಭಕ್ತಿ ಬೆಳೆಯಲಿ.

**ಮಜ್ಜಿಗೆಯೊಳಗಿನ ಬೆಣ್ಣೆಯಂದದಿ ಬಾ -**

ಹಾಲು ಹೆಪ್ಪು ಹಾಕಬೇಕು. ಮೊಸರಾಗ ಬೇಕು. ಮಂಥನ ಮಾಡಬೇಕು. ಬೆಣ್ಣೆ ಮೇಲೆ ತೇಲಿ ಬರಬೇಕು. ಶಾಸ್ತ್ರವೇ ಕ್ಷೀರ. ಶ್ರವಣವೇ ಹೆಪ್ಪು. ಮನನವೇ ಮಂಥನ. ಲಕ್ಷ್ಮೀ ನಾರಾಯಣರ ಅನುಗ್ರಹವೇ ತೇಲುವ ಬೆಣ್ಣೆ. ಕಾಸಿ ಮಾಗಿದಾಗ ಬೆಣ್ಣೆ ತುಪ್ಪವಾಗುತ್ತದೆ. ಅಂತೆಯೇ ಜ್ಞಾನ ಭಕ್ತಿ ಪಕ್ವವಾಯಿತೋ - ಅದೇ ತುಪ್ಪ. ಮೋಕ್ಷವೆಂಬ ಪುರುಷಾರ್ಥ.

ತುಪ್ಪ ಗಟ್ಟಿ. ಸ್ನಿಗ್ಧ. ನಿರಂತರ ಸುಖದ ಸಂಕೇತ. ಇನ್ನೊಂದು, ಹಾಲಿನಲ್ಲಿ ಬೆಣ್ಣೆ ಇದೆ. ಕಾಣುವುದಿಲ್ಲ. ಅವ್ಯಕ್ತ. ಅಂತೆಯೇ ಸೂಕ್ಷ್ಮ ಪ್ರಕೃತಿ ತತ್ವ. ಅದೂ ಅವ್ಯಕ್ತ. ಲಕ್ಷ್ಮೀಯೇ ಅದಕ್ಕೆ ಅಭಿಮಾನಿ. ಪರಮಾತ್ಮ ಹೆಪ್ಪು ಬೆರೆಸುತ್ತಾನೆ ಸೃಷ್ಟಿಯ ಆದಿಯಲ್ಲಿ.. ಅವ್ಯಕ್ತ ಪ್ರಕೃತಿಯನ್ನು ವ್ಯಕ್ತಗೊಳಿಸುತ್ತಾನೆ. ಹಾಲು ಹೆಪ್ಪಾಗಿ ಪರಿಣಾಮ ಹೊಂದಿ ಮೊಸರು.

ಪರಮಾತ್ಮನಿಂದ ಮೂಲ ಪ್ರಕೃತಿ ಪರಿಣಾಮ ಹೊಂದಿ ಮಹತ್, ಅಹಂಕಾರ ತತ್ವವಾಗುತ್ತದೆ.

**ಮಂಥನ**

ಅದರಿಂದ ಪಂಚಭೂತಗಳು, ತನ್ಮಾತ್ರಾದಿಗಳು ಹುಟ್ಟುತ್ತವೆ. ಮತ್ತೆ ಇವುಗಳ ಪಂಚೀಕರಣ, ತ್ರಿವೃತ್ಕರಣ ಅಂದರೆ ಮಿಶ್ರೀಕರಣ ನಡೆಯುತ್ತದೆ. ಇದುವೇ ಮಂಥನ

**ಮಜ್ಜಿಗೆ ಕಡಿಯುವದು.**

ಇದಾದಾಗ ಬ್ರಹ್ಮಾಂಡವೆಂಬ ಬೆಣ್ಣೆ ಮೇಲೆ ತೇಲಿ ಬರುತ್ತದೆ. ಹೀಗೆ ಬ್ರಹ್ಮಾಂಡಕ್ಕೆ ಕಾರಣ ಪ್ರಕೃತಿ. ಪ್ರಕೃತಿಯ ಒಡತಿ ಲಕ್ಷ್ಮೀ. ಇದೆಲ್ಲ ಪರಮಾತ್ಮನ ಸೃಷ್ಟಿ ಪ್ರಕ್ರಿಯೆ. ಸೃಷ್ಟಿ, ಸ್ಥಿತಿ, ಲಯಾದಿ ಅಷ್ಟ

ಕರ್ತೃತ್ವ ಶ್ರೀ ಹರಿಗೆ ಮಾತ್ರ ಉಂಟು. ಇಂಥ ಪರಮಾತ್ಮನ ಸೃಷ್ಟ್ಯಾದಿ ಮಹಿಮೆ, ವೈಭವ ನಮಗೆ ತಿಳಿಸು. ಸೌಭಾಗ್ಯದಾ ತಾಯೇ, ಮೋಕ್ಷದ ದಾರಿ ತೋರಿಸು.

**ಕನಕವೃಷ್ಟಿಯ ಕರೆಯುತ ಬಾರೆ –**

ಬಂಗಾರದ ಮಳೆ ಸುರಿಸುತ ಬಾರೆ. ಎಲ್ಲ ಬಂಗಾರ ನಶ್ವರ. ಬರಿಗೈಯಿಂದ ಬರುವದು ಹೋಗುವದು. ಈ ಸಂಸಾರ, ಧನ-ಕನಕ ಅಲ್ಲ ಶಾಶ್ವತ ಜೊತೆಗಾರ. ನಿಜವಾದ ಬಂಗಾರ ನಾರಾಯಣನ ನಾಮ. ಅದು ಶಾಶ್ವತ ಬಂಗಾರ. ಅನಾದಿ ಅನಂತದ ಜೊತಗಾರ. ಎಂದೆಂದಿಗೂ ನಮ್ಮ ರಕ್ಷಕ. ನಿನ್ನ ನಾಮದ ಬಲವೊಂದಿದ್ದರೆ ಸಾಕೋ! ಹರಿನಾಮ ಬಂಗಾರದ ಮಳೆ ಸುರಿಸುತ್ತ ನಮ್ಮ ಹೃದಯ ಮಂಟಪಕೆ ಬಾ ಜಗನ್ಮಾತೆ.

**ಮನ ಕಾಮನವ ಸಿದ್ದಿಯ ತೋರೆ -**

ನೂರೆಂಟು ಕಾಮನೆಗಳು ಆಸೆಗಳು ನಮಗುಂಟು. ವಿಘ್ನಗಳುಂಟು. ಅನಾನುಕೂಲಗಳುಂಟು ....

ಮನದಲ್ಲಿ ಸ್ಥಿರತೆ ಇಲ್ಲ. ಲೌಕಿಕ ಅನಕೂಲ ಮಾಡಿಕೊಡು,

ಯಾಕೆ?

ಅಲೌಕಿಕ ಪುರುಷನ ಪಡೆಯಲು. ಹರಿಯಲ್ಲಿ ಸ್ಥಿರ ಮನ ಕೊಡು.

**ದಿನಕರಕೋಟಿ -**

ಕೋಟಿ ಸೂರ್ಯ ಪ್ರಭೆ ಮಿಕ್ಕಿದ ತೇಜ ನಿನ್ನದು. ಅನಂತಕೋಟಿ ದಾಟಿದ ಸೂರ್ಯಪ್ರಭೆ ಆತನದು.

**ಜನಕನ ಕುವರಿ –**

ಸೀತೆ. ಜನ - ನ ಜ - ಅ ಜ - ಹುಟ್ಟು ಇಲ್ಲದ ನ ಜನಕ. ಜನನ ಮರಣವಿಲ್ಲದ ಸೀತೆ.

ಜನನಿ, ಜನಕರಿಲ್ಲದ ಜಾನಕಿ ಅವಳು. ಭೂಮಿಯಿಂದ ಆವಿರ್ಭವಿಸಿದ ಭಾಗ್ಯದ ಲಕ್ಷ್ಮೀ ಅವಳು.

ಹರಿ ರಾಮನಾದರೆ, ಸೀತೆ ನೀನು. ಆತ ಕೃಷ್ಣನಾದರೆ ನೀನು ರುಕ್ಮಿಣಿ. ಶ್ರೀ ಹರಿಯ ನಿತ್ಯಾವಿಯೋಗಿನಿ ನೀನು ನಮ್ಮನ್ನು ಅನುಗ್ರಹಿಸು.

**ಸಂಖ್ಯೆ ಇಲ್ಲದ ಭಾಗ್ಯವ ಕೊಟ್ಟು -**

ಲೌಕಿಕದಲ್ಲಿ ಎಲ್ಲವೂ ಸಂಖ್ಯೆ ಇದ್ದ ಭಾಗ್ಯವೇ. ಅಂದರೆ ಪರಿಮಿತ. ಪರಮಾತ್ಮನ ಮಂಗಳಕರ ಗುಣಗಳು ಅನಂತ. ಅಸಂಖ್ಯವೆಂದರೆ ಅವೇ. ಅವನ ಅನಂತ ಕಲ್ಯಾಣಗುಣಗಳ ಮಹಾತ್ಮೆ ತಿಳಿಸು. ಆತನ ಗುಣ ಮಹಾತ್ಮೆ ತಿಳಿಯುವದೇ ಸಂಖ್ಯೆ ಇಲ್ಲದ ಭಾಗ್ಯ. ಈ ಸೌಭಾಗ್ಯವ ಕೊಡು.

**ಕಂಕಣ ಕೈಯ ತೋರುತ ಬಾರೆ**

**ಕುಂಕುಮಾಂಕಿತೆ ಪಂಕಜ ಲೋಚನೆ,**

**ವೆಂಕಟರಮಣನ ಬಿಂಕದ ರಾಣಿಯೇ -**

ಕಂಕಣ- ಶುಬ, ಮಂಗಳ ಸಂಕೇತ. ಶುಭ ಸೂಚಿಸುವ ಅಭಯ ಹಸ್ತ ತೋರುತ ಬಾ.

ಆತನ ಅಭಯ ಹಸ್ತ ದರ್ಶನ ಕೊಡಿಸು ಬಾ. ಪಂಕಜನಾಭ ಆತನಾದರೆ ಪಂಕಜ ಲೋಚನೆ ನೀನು.

ಕಮಲಾಲಯೇ, ಕಮಲೆ ಅನುಗ್ರಹಿಸು.

ಬಿಂಕದ ರಾಣಿ, ಯಾಕೆ?

ನೀನು ಅನಾದಿಯಿಂದ ನಾರಾಯಣನ ಪತ್ನಿ. ನಿತ್ಯಾವಿಯೋಗಿನಿ. ಸದಾ ವಕ್ಷೋ ನಿವಾಸಿನಿ. ನಿನ್ನ ಬಿಟ್ಟು ನಿನ್ನ ನಲ್ಲ, ಬೇರೆ ಯಾರ ಸಂಗ ವಲ್ಲ. ಎಂದೆಂದೂ ಇಲ್ಲ.

ಸೀತಾರಾಮ ಏಕಪತ್ನೀ ವ್ರತಸ್ಥ.

ಕೃಷ್ಣ ಸಾವಿರಾರು ಕನ್ಯೆ ವರಿಸಿದರೂ - ಎಲ್ಲರಲ್ಲೂ ಲಕ್ಷ್ಮೀಯನ್ನಿಟ್ಟೇ ಮುಟಿದ್ದು. ಹೀಗಾಗಿ ಅನ್ಯರ ಒಲ್ಲೆ ಎನ್ನುವವನ ನಲ್ಲೆ ನೀನು. ಹರಿಯ ಏಕಮಾತ್ರ ಪಟ್ಟದರಾಣಿ ನೀನು. ಈ ಹೆಮ್ಮೆಯ, ಬಿಂಕದ ರಾಣಿ ನೀನು. ಪೂಜೆಯ - ಧ್ಯಾನದ ವೇಳೆಗೆ ಶ್ರೀ ಹರಿಯ ಜೊತೆಗೆ ಗೋಚರಿಸು

**ಅತ್ತಿತ್ತಗಲದೆ ಭಕ್ತರ ಮನೆಯಲಿ**

**ನಿತ್ಯ ಸುಮಂಗಳ ನಿತ್ಯ ಮಹೋತ್ಸವ**

ಹರಿನಾಮ ನೆನೆದ ದಿನವೇ ಹಬ್ಬ. ಮಹೋತ್ಸವ. ಸುಮಂಗಲ. ಹರಿ ಮಹಾತ್ಮೆ ಶ್ರವಣ ಮನನದ ಮಹೊತ್ಸವ ಮಂಗಲ ನಿತ್ಯವಾಗುವಂತೆ ಮಾಡು ತಾಯೇ.

**ಸತ್ಯವ ತೋರುತ** ಸಾಧು ಸಜ್ಜನರ

**ಚಿತ್ತದಿ ಹೊಳೆಯುವ ಪುತ್ತಳಿಗೊಂಬೆ**

ಅತ್ತಿತ್ತಗಲದಂತೆ, ಚಿತ್ತ, ಚಿತ್ತಜನಯ್ಯನ ಪಾದದಿ ನೆಲೆಸಲಿ. ಅಂತು ಅನುಗ್ರಹಿಸು. ಸಜ್ಜನರಿಗೆ ಸತ್ಯನಾಮಕ ಪರಮಾತ್ಮ- ನಿತ್ಯ ಸತ್ಯನಾದ ನಾರಾಯಣ – ಬಿಂಬರೂಪ - ಮನದಲಿ ಮಿಂಚಿನಂತೆ ಹೊಳೆಯಲಿ. ಶ್ರೀ ರಮಣನ ದರ್ಶನ ಮಾಡಿಸು ತಾಯೇ. ಸಚ್ಚಿದಾನಂದಮಯೇ.

**ಸಕ್ಕರೆ ತುಪ್ಪದ ಕಾಲುವೆ ಹರಿಸಿ**

**ಶುಕ್ರವಾರದ ಪೂಜೆಯ ವೇಳೆಗೆ**

**ಅಕ್ಕರೆಯುಳ್ಳ ಅಳಗಿರಿರಂಗನ**

**ಚೊಕ್ಕ ಪುರುಂದರ ವಿಠ್ಠಲನ ರಾಣಿ**

ಸಕ್ಕರೆ ಸಿಹಿ - ಅದು ಜ್ಞಾನದ ಸಂಕೇತ. ತುಪ್ಪ ಸ್ನಿಗ್ಧ. ಪ್ರೀತಿ, ಭಕ್ತಿಯ ಸಂಕೇತ ....

ತುಪ್ಪ ನೀರಲ್ಲಿ ತೇಲುತ್ತದೆ. ಅಂಟಿಸಿಕೊಳ್ಳುವದಿಲ್ಲ. ಅಂತೆಯೇ ವಿರಕ್ತಿಯ ಸಂಕೇತವೂ ಹೌದು. ಸಂಸಾರದಲ್ಲಿ ಇರಬೇಕು ಇಲ್ಲದಂತಿರಬೇಕು. ಜ್ಞಾನ ಭಕ್ತಿ ಕಾಲುವೆಯಾಗಲಿ. ಉಕ್ಕಿ ಹರಿಯಲಿ ಭಗವಂತನತ್ತ.

**ಶುಕ್ರವಾರ ಲಕ್ಷ್ಮೀವಾರ. ಶುಭದಿನ. ಹರಿಯ ನೆನೆದ ಪ್ರತಿದಿನ ಶುಭದಿನ.**

ತಾಯೆ.

ಸದಾ ಅಕ್ಕರೆಯುಳ್ಳವ ಶ್ರೀ ರಂಗ ನಿನ್ನಲ್ಲಿ. ಚೊಕ್ಕ ವಿಠ್ಠಲ - ಚೊಕ್ಕ ಎಂದರೆ ದೋಷ ರಹಿತ - ಮಂಗಳ ಭರಿತ ವಿಠಲನ ರಾಣಿ. ಇಂಥ ಭಾಗ್ಯದ ಲಕ್ಷ್ಮೀ ದೇವಿಯೇ, ಪತಿ ಸಹಿತ, ನಮ್ಮ ಮನೆಗೆ - ಹೃದಯ ಮಂಟಪಕೆ ಬಂದು, ಹರಿಯ ದರ್ಶನವೆಂಬ ಸೌಭಾಗ್ಯ ಕೊಟ್ಟು ಅನುಗ್ರಹಿಸು, ತಾಯೇ ಜಗನ್ಮಾತೆ.

ಈ ರೀತಿಯಾಗಿಯೂ ಅರ್ಥೈಸಬಹುದು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ